# ‘ಸನ್ ಆಫ್ ಮುತ್ತಣ್ಣ’ನಾದ ಪ್ರಣಮ್



ನಟ ದೇವರಾಜ್ ಕಿರಿಯ ಮಗ ಪ್ರಣಮ್ ದೇವರಾಜ್ ನಟನೆಯ ‘ಸನ್ ಆಫ್ ಮುತ್ತಣ್ಣ’ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಚಿತ್ರವನ್ನು ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ.

ಕೆಲವೇ ದಿನಗಳಲ್ಲಿ ಸಿನಿಮಾ ಬಿಡುಗಡೆಗೊಳಿಸುವ ಸೂಚನೆಯನ್ನು ಚಿತ್ರತಂಡ ನೀಡಿದೆ. ಅಪ್ಪ–ಮಗನ ಬಾಂಧವ್ಯದ ಕಥೆ ಈ ಸಿನಿಮಾ ತಿರುಳಾಗಿದ್ದು, ಪ್ರೇಕ್ಷಕರ ಮನಸ್ಸನ್ನು ಗೆಲ್ಲಲಿದೆ ಎಂದು ನಟ ಪ್ರಣಮ್ ಭರವಸೆ ವ್ಯಕ್ತಪಡಿಸಿದ್ದಾರೆ.

‘ಈ ಸಿನಿಮಾದ ಕಥೆ ಅಪ್ಪ ಮಗನ ಬಾಂಧವ್ಯವನ್ನು ಹೇಳುವಂಥದ್ದು. ಇದು ಬರೀ ಸಿನಿಮಾ ಪಯಣ ಆಗಿರದೇ ನನ್ನ ಪಾಲಿಗೆ ಭಾವನಾತ್ಮಕವಾದ ಪ್ರಯಾಣ ಎನಿಸಿತು. ನಮ್ಮ ಕುಟುಂಬದಲ್ಲಿ ಅಪ್ಪ ಮಗನ ಬಾಂಧವ್ಯ ಹೇಗಿದೆ ಎಂಬುದನ್ನು ಜನ ನೋಡಿದ್ದಾರೆ. ರಂಗಾಯಣ ರಘು ಅವರು ನನಗೆ ತಂದೆ ರೀತಿಯಲ್ಲಿ ಸೆಟ್‌ನಲ್ಲಿ ಇದ್ದರು. ಖುಷಿ ಅದ್ಭುತ ನಟಿ’ ಎಂದು ಸಿನಿಮಾ ಬಗ್ಗೆ, ನಟರ ಬಗ್ಗೆ ಮನ ತುಂಬಿ ಮಾತನಾಡಿದ್ದಾರೆ ಪ್ರಣಮ್.

ಶ್ರೀಕಾಂತ್ ಹುಣ್ಸೂರ್ ಈ ಸಿನಿಮಾ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಪ್ರಣಮ್ ದೇವರಾಜ್‌ಗೆ ನಾಯಕಿಯಾಗಿ ಖುಷಿ ರವಿ ಸಾಥ್ ಕೊಟ್ಟಿದ್ದಾರೆ. ರಂಗಾಯಣ ರಘು, ಸುಚೇಂದ್ರ ಪ್ರಸಾದ್, ಗಿರಿ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ತಾರಾಬಳಗದಲ್ಲಿದ್ದಾರೆ. ■

# ಕನ್ನಡದಲ್ಲಿ ಡಬ್ ಮಾಡಲು ರೆಡಿ; ಐಶ್ವರ್ಯ



ಬಹುತಾರಾಗಣದ, ಬಹು ನಿರೀಕ್ಷೆಗಳನ್ನು ಹುಟ್ಟುಹಾಕಿರುವ ‘ಉತ್ತರಕಾಂಡ’ ಸಿನಿಮಾದ ಚಿತ್ರೀಕರಣ ಈಚೆಗೆ ಬೆಳಗಾವಿಯಲ್ಲಿ ನಡೆದಿದ್ದು, ನಟ ಶಿವರಾಜ್‌ಕುಮಾರ್ ಹಾಗೂ ನಟಿ ಐಶ್ವರ್ಯ ರಾಜೇಶ್ ಪಾಲ್ಗೊಂಡಿದ್ದರು.

ಸಿನಿಮಾದಲ್ಲಿ ‘ದುರ್ಗಿ’ ಪಾತ್ರಕ್ಕೆ ನಟಿ ಐಶ್ವರ್ಯ ರಾಜೇಶ್ ಬಣ್ಣ ಹಚ್ಚಿದ್ದು, ಕನ್ನಡಕ್ಕೆ ಹೊಸಬರಾಗಿರುವ ಅವರು ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಲು ಎಲ್ಲ ಪ್ರಯತ್ನಗಳನ್ನು ಮಾಡಿರುವುದಾಗಿ ಹೇಳಿದ್ದಾರೆ.

‘ಉತ್ತರಕಾಂಡ’ ಸಿನಿಮಾದಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆ ಬಳಸಲಾಗಿದ್ದು, ಅದಕ್ಕೆ ತಯಾರಿ ಮಾಡಿಕೊಂಡ ಬಗ್ಗೆ ಐಶ್ವರ್ಯ ಮಾತನಾಡಿದ್ದಾರೆ.

‘ಸಿನಿಮಾ ತಂಡ ನನಗೆ ಕಂಫರ್ಟೆಬಲ್ ಭಾವ ನೀಡಿತು. ನಾನು ಸ್ವಲ್ಪ ಗಾಬರಿ ಆಗಿದ್ದೆ. ಕನ್ನಡಕ್ಕೆ ನಾನು ಹೊಸಬಳು. ಅದರಲ್ಲೂ ಪ್ರಾದೇಶಿಕ ಭಾಷೆ ಎಂದರೆ ಕಷ್ಟ. ಹೀಗಾಗಿ ನೋಟ್ ಮಾಡಿಕೊಂಡು, ವಾಯ್ಸ್‌ನೋಟ್ ಕೇಳಿ ಉಚ್ಚಾರಣೆ ಬಗ್ಗೆ ತಿಳಿಯುತ್ತಿದ್ದೆ. ಶಾಲೆಯಲ್ಲಿ ಕಲಿತಂತೆ ಅನಿಸಿತು’ ಎಂದಿದ್ದಾರೆ.

ನಿಮ್ಮ ಪಾತ್ರಕ್ಕೆ ಕನ್ನಡದಲ್ಲಿ ನೀವೇ ಡಬ್ ಮಾಡಬಲ್ಲಿರಾ ಎಂಬ ಪ್ರಶ್ನೆಗೆ, ‘ಏಕಾಗಬಾರದು? ನಾನು ಖಂಡಿತ ಪ್ರಯತ್ನಿಸುತ್ತೇನೆ. ನನಗೆ ಆಗುವುದಿಲ್ಲ ಎಂದಲ್ಲ. ನನಗೆ ಬೆಂಬಲ ಸಿಕ್ಕರೆ ಖಂಡಿತ ಮಾಡುತ್ತೇನೆ’ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ. ■

# ಬೂಮ್ ಬೂಮ್...

## ಚರಣ್ ಹೊಸ ಸಮಾಚಾರ

ಸಂಗೀತ ನಿರ್ದೇಶಕ ಚರಣ್ ರಾಜ್, ಹೊಸ ಟ್ರ್ಯಾಕ್‌ನೊಂದಿಗೆ ಬಂದಿದ್ದಾರೆ. ಅದರಲ್ಲಿ ಹೊಸ ವಿಷಯಗಳನ್ನೂ ತಂದಿದ್ದಾರೆ. ‘ಭೀಮಾ’ ಸಿನಿಮಾದ ‘ಬೂಮ್ ಬೂಮ್ ಬ್ಯಾಂಗಲೋರ್’ ಎಂಬ ಟ್ರ್ಯಾಕ್‌ನಲ್ಲಿ ಹಲವು ವೈಶಿಷ್ಟ್ಯಗಳನ್ನು ಪರಿಚಯಿಸಿದ್ದಾರೆ.

ಈ ಹಾಡಿನ ಬಗ್ಗೆ ಮಾತನಾಡುತ್ತಾ, ‘ಈ ಹಾಡು ನಾಗರಹೊಳೆಯ ಸುಮಾರು 30 ಬುಡಕಟ್ಟು ಮಂದಿಯ ಧ್ವನಿ ಒಳಗೊಂಡಿದೆ. ಬೆಂಗಳೂರಿನ ಕುರಿತ ಹಾಡನ್ನು ಅವರದೇ ರೀತಿಯಲ್ಲಿ ಹಾಡಿರುವುದು ಬಹಳ ಭಿನ್ನ ಎನಿಸುತ್ತದೆ. ಈ ತಂಡ ನಾಗರಹೊಳೆಗೆ ಭೇಟಿ ನೀಡುವ ಟ್ರಾವೆಲರ್‌ಗಳಿಗೆ ಮನರಂಜನೆ ನೀಡುತ್ತಿತ್ತು. ಇದೇ ಮೊದಲ ಬಾರಿಗೆ ಸಿನಿಮಾಗೆ ಧ್ವನಿ ನೀಡಿದೆ. ಹಾಡು ಜನಪದದ ಸಾಲುಗಳನ್ನು ಒಳಗೊಂಡಿದ್ದು, ಬೆಂಗಳೂರಿನ ಬೇರೆ ಮುಖವನ್ನು ತೋರುತ್ತದೆ. ಟ್ರಾವೆಲ್ ಸಾಂಗ್ ಆಗಿದೆ’ ಎಂದು ಚರಣ್ ರಾಜ್ ಹೇಳಿದ್ದಾರೆ. ■

